ಅಸಲು ದಾವೆ ನಂ:96/2016

ಪಿಡಬ್ಲೂ-1

ದಿನಾಂಕ 05-08-2017 ರಂದು ಸಾಕ್ಷಿಗೆ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಪಿ.ಕೆ ವಕೀಲರಿಂದ.**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು , ಆದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ಓದಿಸಿ ತಿಳಿದುಕೊಂಡು ಆದರ ಮೇಲೆ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ.

ಈಗ ನಾನು ದಾವೆಯಲ್ಲಿ ಸಲ್ಲಿಸಿದ ದಾಖಲೆಗಳನ್ನು ನೋಡುತ್ತಿದ್ದು ಅವುಗಳಲ್ಲಿ ಸರ್ವೆ ನಂಬರ 37/2 ಮತ್ತು 37/3 ರ ಎರಡು ಪಹಣಿ ಪತ್ರಿಕೆಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು ನಿಪಿ-2 ಎಂದು, 13 ಕೈಬರಹದ ಪಹಣಿ ಪತ್ರಿಕೆಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-3 ರಿಂದ ನಿಪಿ-15 ಎಂದು, 86 ಗಣಕೀಕೃತ ಪಹಣಿ ಪತ್ರಿಕೆಗಳನ್ನು ನೋಡುತ್ತಿದ್ದು ಅವುಗಳನ್ನು ಕ್ರಮವಾಗಿ ನಿಪಿ-16 ರಿಂದ ನಿಪಿ-101 ಎಂದು, ಮೂಲ ದಾವೆ ನಂಬರ 22/2014 ರಲ್ಲಿ ಸಲ್ಲಿಸಿದ ವಾದ ಪತ್ರದ ದೃಢೀಕೃತ ನಕಲನ್ನು ನಿಪಿ-102 ಎಂದು, ಮೂಲ ದಾವೆ ನಂಬರ 22/2014 ರ ಡಿಕ್ರಿಯ ದೃಢಿಕೃತ ನಕಲನ್ನು ನಿಪಿ-103 ಎಂದು, ಮೂಲ ದಾವೆ ನಂಬರ 22/2014 ರಲ್ಲಿ ಆದ ತೀರ್ಪಿನ ದೃಢೀಕೃತ ಪ್ರತಿಯನ್ನು ನಿಪಿ-104 ಎಂದು, ಮೂಲ ದಾವೆ ನಂಬರ 22/2014 ರಲ್ಲಿ ಸಲ್ಲಿಸಿದ ಪಿಡಬ್ಲೂ-1 ಮತ್ತು 2 ರವರ ಮುಖ್ಯ ವಿಚಾರಣೆಯ ಶಪಥ ಪತ್ರದ ದೃಢೀಕೃತ ನಕಲುಗಳನ್ನು ಕ್ರಮವಾಗಿ ನಿಪಿ-105 ಮತ್ತು ನಿಪಿ-106 ಎಂದು, 1 ಮುಟೇಶನ್ ಪ್ರತಿಯ ದೃಢೀಕೃತ ನಕಲನ್ನು ನಿಪಿ-107 ಎಂದು, 6 ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳನ್ನು ಕ್ರಮವಾಗಿ ನಿಪಿ-108 ರಿಂದ ನಿಪಿ-113 ಎಂದು, 1 ಅಡಮಾನ ಪತ್ರದ ದೃಢೀಕೃತ ನಕಲನ್ನು ನಿಪಿ-114 ಎಂದು, ಕಾನೂನು ಬದ್ಧ ನೋಟಿಸ್ ಪ್ರತಿಯನ್ನು ನಿಪಿ-115 ಎಂದು, ಅಂಚೆ ರಶೀದಿಗಳ ದೃಢೀಕೃತ ನಕಲನ್ನು ನಿಪಿ-116 ಎಂದು, ಇನ್ನೊಂದು ಕಾನೂನು ಬದ್ಧ ನೋಟಿಸ್‌ನ ದೃಢೀಕೃತ ನಕಲನ್ನು ನಿಪಿ-117 ಎಂದು, ವಂಶವೃಕ್ಷದ ದೃಢೀಕೃತ ಪ್ರತಿಯನ್ನು ನಿಪಿ-118 ಎಂದು, 1 ನಕಾಶೆಯ ದೃಢೀಕೃತ ನಕಲನ್ನು ನಿಪಿ-119 ಎಂದು, 1 ಟೊಂಚ ಮ್ಯಾಪಿನ ದೃಢೀಕೃತ ನಕಲನ್ನು ನಿಪಿ-120 ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೇ. ಸರಿ ಇದೆ.**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ